ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಬಂಧಿಖಾನೆಗಳ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) –

548 (515) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಒಟ್ಟು ಬಂಧಿಖಾನೆಗಳೆಷ್ಟು; ಅವುಗಳು ಯಾವುವು; (ಖೈದಿಗಳ ಸಾಮರ್ಥ್ಯವಾರು ವಿವರ ನೀಡುವುದು)

(ಆ) ಕಳೆದ ವರ್ಷ ಯಾವ ಯಾವ ಜೈಲುಗಳಲ್ಲಿ ಸಾಮಥ್ಯ್ರಕ್ಕಿಂತ ಅಧಿಕ ಖೈದಿಗಳು ಇದ್ದರು; ಅವುಗಳು ಯಾವುವು;

(ಇ) ಹೆಚ್ಚು ಖೈದಿಗಳು ಇದ್ದಲ್ಲಿ ಅವರನ್ನು ಇರಿಸಲು ಯಾವ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿತ್ತು;

(ಈ) ಜೈಲುಗಳಲ್ಲಿರುವ ಪುರುಷ ಮತ್ತು ಮಹಿಳಾ ಖೈದಿಗಳ ಸಂಖ್ಯೆ ಎಷ್ಟು;

(ಉ) ಜೈಲಿನಲ್ಲಿ ಅಗತ್ಯವಿರುವ ಸಿಬ್ಬಂದಿ ಎಷ್ಟು; ಇದರಲ್ಲಿ ಮಂಜೂರಾಗಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು;

(ಊ) ಕೊರತೆ ಇದ್ದಲ್ಲಿ, ಯಾವ ಕಾರಣಕ್ಕಾಗಿ ಕೊರತೆ ಇದೆ; ಇದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಋ) ಜೈಲುಗಳಲ್ಲಿ ಖೈದಿಗಳ ಆರೋಗ್ಯ ತಪಾಸಣೆಗೆ ಅಗತ್ಯವಿರುವ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇದರಲ್ಲಿ ಮಂಜೂರಾತಿ ಎಷ್ಟು; ಕೊರತೆ ಎಷ್ಟು; ಇದಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

(ಎ) ಖೈದಿಗಳ ತಪಾಸಣೆಗಾಗಿ 2019ರ ಡಿಸೆಂಬರ್ ಅಂತ್ಯಕ್ಕೆ ಇದ್ದ ವೈದ್ಯಕೀಯ ಸಿಬ್ಬಂದಿ ಎಷ್ಟು? (ಅಂಕಿ ಅಂಶಗಳ ಮಾಹಿತಿ ನೀಡುವುದು)